


ಕುಳಿತು ಇವನನ್ನು ನೋಡಿ ಮುಗುಳ್ನಕ್ಕ.

ನಂದಕಿಶೋರನಿಗೆ ಅವನನ್ನು ಕಂಡು ಇರಿಸುಮುರಿಸಾಗಿ ಗೋಳಿಬಜೆಯ ಸ್ವಾದವೇ ಅರಿವಿಗೆ ಬಾರದಂತಾಯಿತು. ಸ್ವಲ್ಪ ನೀರು ಕುಡಿದು ಅವನತ್ತ ಆಶ್ಚರ್ಯದಿಂದ ಮತ್ತು ಅಸಮಾಧಾನದಿಂದ ನೋಡಿದ.

ಬಂದವನು ರಾಜ. ಅಥವಾ ರಾಜಗೋಪಾಲ. ನಂದಕಿಶೋರ ಮೈಸೂರಿನಲ್ಲಿ ಇಂಗ್ಲಿಷ್ ಎಂ.ಎ. ಮಾಡುತ್ತಿದ್ದಾಗ ಅವನಿಗೆ ಎರಡು ವರ್ಷ ಉಚಿತವಾಗಿ ಊಟ-ವಸತಿ ಕೊಟ್ಟ ಕೃಷ್ಣವಿಲಾಸ ಹೋಟೆಲಿನ ರಾಮಚಂದ್ರ ರಾಯರ ಮಗ.

ಆ ಕಾರಣದಿಂದ ರಾಜ ಕಳೆದ ಒಂದು ತಿಂಗಳಲ್ಲಿ ಎರಡು ಬಾರಿ ನಂದಕಿಶೋರನಿಂದ ಹಣ ಕೇಳಿ ಪಡೆದಾಗಿತ್ತು. ಈಗ ಇಲ್ಲಿಗೆ ತನ್ನನ್ನು ಹುಡುಕಿ ಕೊಂಡು ಬಂದದ್ದು ಕೂಡ ದೊಡ್ಡ ಮೊತ್ತದ ಹಣ ಕೇಳಲು ಎಂದು ನಂದಕಿಶೋರ ಪೂರ್ವಾನುಭವದಿಂದ ಊಹಿಸಿ ವಿಚಲಿತನಾದ.

ಒಂದು ಹಳೆಯ, ನಸುಹಳದಿ ಮತ್ತು ಕಂದು ಬಣ್ಣದ ಅಗಲ ಉದ್ದಪಟ್ಟಿಗಳ ಅರ್ಧ ತೋಳಿನ ಅಂಗಿ, ನೇರಳೆ ಬಣ್ಣದ ಪ್ಯಾಂಟು, ಪ್ಲಾಸ್ಟಿಕ್ ಚಪ್ಪಲಿ ಹಾಕಿಕೊಂಡಿದ್ದ ರಾಜ ಕುರುಚಲು ಗಡ್ಡ ಬೆಳೆಸಿಕೊಂಡಿದ್ದ. ತನಗಿಂತ ನಾಲ್ಕೈದು ವರ್ಷ ಚಿಕ್ಕವ, ತಾನು ಎಂ.ಎ ಮಾಡುತ್ತಿದ್ದಾಗ ಪಿಯುಸಿಗೆ ಸೇರಿಕೊಂಡಿದ್ದ. ಶಾಲೆಗೆ ಸರಿಯಾಗಿ ಹೋಗದೆ ಪೋಲಿ ತಿರುಗುತ್ತಿದ್ದ ಎಂಬ ಸುದ್ದಿ ಆ ದಿನಗಳಲ್ಲಿ ಕೇಳಿಬರುತ್ತಿತ್ತು. ಈಗ ವಯಸ್ಸು ಮೂವತ್ತಾಗಿದ್ದರೂ ಮದುವೆಯಾಗಿರಲಿಲ್ಲ. ಕಳೆದ ತಿಂಗಳು ಉಡುಪಿಯ ಸಮೀಪದ ಕೆಮುಂಡೆಲು ಎಂಬಲ್ಲಿದ್ದ ಅವರ ಮನೆಗೆ ರಾಮಚಂದ್ರ ರಾಯರನ್ನು ನೋಡಲು ಹೋಗಿದ್ದಾಗ ರಾಜನ ಬಗ್ಗೆ ಈ ಮಾಹಿತಿ ಗೊತ್ತಾಗಿತ್ತು.

ನಂದಕಿಶೋರ ತನ್ನನ್ನೇ ಗಾಬರಿಯಿಂದ ನೋಡುತ್ತಿದ್ದಾನೆನ್ನಿಸಿ ರಾಜ, 'ತಿನ್ನಿ ತಿನ್ನಿ, ಮತ್ತೆ ಮಾತಾಡೋಣ' ಎಂದು ಹೇಳಿ, ತನ್ನ ಅಂಗಿಯ ಕಿಸೆಗೆ ಕೈಹಾಕಿ, ಅದರಲ್ಲಿದ್ದ ಒಂದೇ ಒಂದು ಸಿಗರೇಟನ್ನು ತೆಗೆದು ತುಟಿಗಿಟ್ಟುಕೊಂಡು, ಪ್ಯಾಂಟಿನ ಕಿಸೆಯಿಂದ ತೆಗೆದ ಲೈಟರಿನಿಂದ ಅದನ್ನು ಹತ್ತಿಸಿಕೊಂಡು ಆಳವಾಗಿ ಹೊಗೆಯೆಳೆದುಕೊಂಡು, ಕಣ್ಣುಗಳನ್ನು